**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 2422/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಸಿರಿಯಣ್ಣ | ಸಿ.ಡಬ್ಲ್ಯೂ-01 |
| ತಂದೆಯ ಹೆಸರು | : | ನರಸಯ್ಯ | ಪಿ.ಡಬ್ಲ್ಯೂ-01 |
| ವಯಸ್ಸು | : | 69 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ರೇಣುಕಾಪುರ | ದಿಃ 21-01-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 01.07.2025 ರಂದು ಬೆಳಿಗ್ಗೆ 06-00 ಗಂಟೆಗೆ ಮನೆಯಿಂದ ನನ್ನ ಬಾಬ್ತು ಬೈಕ್ ನೊಂದಣಿ ಸಂಖ್ಯೆ ಕೆಎ-16 ಇಕೆ-7690 ಹಿರೋಹೊಂಡ ಸ್ಪ್ಲೆಂಡರ್ ಪ್ಲಸ್ ವಾಹನದಲ್ಲಿ ಹೊರಟು, 06-15 ಕ್ಕೆ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಮುಂದೆ ಬೈಕನ್ನು ನಿಲ್ಲಿಸಿರುತ್ತೇನೆ. ನಂತರ ನಾನು ಸರ್ಕಾರಿ ಬಸ್ ನಲ್ಲಿ ರೇಣುಕಾಪುರಕ್ಕೆ ಹೋಗಿದ್ದೆ. ರೇಣುಕಾಪುರದಲ್ಲಿ ವ್ಯವಸಾಯವನ್ನು ಮುಗಿಸಿ ಬಸ್ ನಲ್ಲಿ ವಾಪಸ್ಸು ಬರಲು ಆಗದ ಕಾರಣ ರೇಣುಕಾಪುರದಲ್ಲೇ ಉಳಿದುಕೊಂಡು ಮಾರನೇ ದಿನ ಬೆಳಿಗ್ಗೆ 08-00 ಗಂಟೆಗೆ ಬಸ್ಸಿನಲ್ಲಿ ಚಳ್ಳಕೆರೆಗೆ ಬಂದಿರುತ್ತೇನೆ. ಆಗ ಸರ್ಕಾರಿ ಆಸ್ಪತ್ರೆಯಲ್ಲಿ ನಿಲ್ಲಿಸಿದ್ದ ನನ್ನ ಬೈಕ್ ಇರಲಿಲ್ಲ. ಸುತ್ತಮುತ್ತ ಹುಡುಕಾಡಿದರೂ ಎಲ್ಲಿಯೂ ಬೈಕ್ ಕಂಡು ಬಂದಿರಲಿಲ್ಲ, ನಂತರ ದಿನಾಂಕ 17.08.2025 ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ದೂರು ದಾಖಲಿಸಿದ ನಂತರ ನಾನು, ಚಾಸಾ-2 ಮತ್ತು 3 ರವರು ಆಸ್ಪತ್ರೆಯ ಹತ್ತಿರ ಹೋಗಿದ್ದು, ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಪರಿಶೀಲನೆ ಮಾಡಿರುತ್ತಾರೆ. ಆಗ ಸಮಯ 01.00 ರಿಂದ 02.00 ಗಂಟೆ ಸಮಯ ಆಗಿತ್ತು.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಭಾವಚಿತ್ರವನ್ನು ನಿಪಿ.3 ಅಂತ ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಪರಿಶೀಲನೆ ಮಾಡುವಾಗಿ ತೆಗೆದಿರುತ್ತಾರೆ.

ಪೊಲೀಸರು ಮೂರು ತಿಂಗಳ ನಂತರ ದೂರವಾಣಿ ಕರೆ ಮಾಡಿ ಬೀರೂರಿನಲ್ಲಿ ಬೈಕ್ ಸಿಕ್ಕಿರುವ ವಿಚಾರವನ್ನು ತಿಳಿಸಿರುತ್ತಾರೆ. ನಂತರ ನಾನು ಠಾಣೆಗೆ ಬೈಕನ್ನು ನೀಡಿರುತ್ತೇನೆ. ಬೈಕನ್ನು ಹಿರಿಯೂರು ತಾಲ್ಲೂಕಿನ ಅಜಾದ್ ನಗರದ ವ್ಯಕ್ತಿಯು ಕಳ್ಳತನ ಮಾಡಿರುತ್ತಾನೆ ಎಂದು ತಿಳಿದಿರುತ್ತದೆ. ಕಳ್ಳತನ ಮಾಡಿದ ವ್ಯಕ್ತಿಯನ್ನು ಸಿಸಿ ಕ್ಯಾಮೆರಾದ ವಿಡಿಯೋದಲ್ಲಿ ಹಾಗೂ ಠಾಣೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈ ಬಗ್ಗೆ ನಾನು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಂತರ ಕಳ್ಳತನವಾದ ನನ್ನ ಬೈಕನ್ನು ಚಾಸಾ-37 ಮತ್ತು 38 ರವರ ಸಮಕ್ಷಮ ಭಾವಚಿತ್ರ ತೆಗೆಸಿ ನೀಡಿರುತ್ತಾರೆ.

ಸಾಕ್ಷಿಗೆ ವಾಹನ ಬಿಡುಗಡೆ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ವಾಹನ ಬಿಡುಗಡೆ ಪಂಚನಾಮೆ ನಿಪಿಃ4 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 4(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ, ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಭಾವಚಿತ್ರಗಳನ್ನು ನಿಪಿ.5 ಮತ್ತು 6 ಅಂತ ಗುರುತಿಸಲಾಯಿತು. ಸದರಿ ಭಾವಚಿತ್ರಗಳನ್ನು ವಾಹನ ಬಿಡುಗಡೆ ಪಂಚನಾಮೆ ಜರುಗಿಸುವ ಸಮಯದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 18.08.2025 ರಂದು ಮಹಜರ್ ಕ್ರಮ ಜರುಗಿಸಲಾಗಿರುತ್ತದೆ ಎಂದರೆ ಸರಿ. ದಿನಾಂಕ 05.10.2025 ರಂದು ನನ್ನನ್ನು ಠಾಣೆಗೆ ಕರೆಸಲಾಗಿತ್ತು ಎಂದರೆ ಸರಿ. ಠಾಣೆಯಲ್ಲಿ ಆರೋಪಿಯನ್ನು ಹಾಗೂ ನನ್ನ ಬೈಕನ್ನು ತೋರಿಸಿದ್ದರು ಎಂದರೆ ಸರಿ. ಆತನ ಹೆಸರು ಮೊಹಮ್ಮದ್ ಷರೀಫ್ ಎಂದು ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ದಿನಾಂಕ 14.11.2025 ರಂದು ನಿಪಿ.4 ರಂತೆ ಮಹಜರ್ ಕ್ರಮ ಜರುಗಿಸಿ ಬೈಕನ್ನು ನನ್ನ ವಶಕ್ಕೆ ನೀಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಟಿ .ಎಸ್.ಎಂ., ಆರೋಪಿ ಪರ ವಕೀಲರಿಂದಃ**

ನಾನು ಸಾರ್ವಜನಿಕ ಸ್ಥಳದಲ್ಲಿ ಬೈಕನ್ನು ನಿಲ್ಲಿಸಿದ್ದರಿಂದ ಬಹಳಷ್ಟು ಜನರು ಅಲ್ಲಿ ಓಡಾಡುತ್ತಾರೆ ಎಂದರೆ ಸರಿ. ಬೈಕನ್ನು ಆಸ್ಪತ್ರೆಯ ಕಾಂಪೌಂಡ್ ಒಳಗಡೆ ನಿಲ್ಲಿಸಿದ್ದೆ. ಆಸ್ಪತ್ರೆಯಲ್ಲಿ ವಾಹನವನ್ನು ಪಾರ್ಕ್ ಮಾಡಲು ವ್ಯವಸ್ಥೆ ಮಾಡಲಾಗಿರುತ್ತದೆ. ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ವಾಹನವನ್ನು ನಿಲ್ಲಿಸಲು ವ್ಯವಸ್ಥೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾಹನವನ್ನು ನಿಲ್ಲಿಸುವ ಸ್ಥಳ ಎಂದು ಬೊರ್ಡ್ ಹಾಕಲಾಗಿತ್ತು. ಸದರಿ ವಿಚಾರವನ್ನು ದುರಿನಲ್ಲಿ ಹೇಳಿರುವುದಿಲ್ಲ. ವಾಹನವನ್ನು ಪಾರ್ಕ್ ಮಾಡಿ ಸೆಕ್ಯೂರಿಟಿ ಸಿಬ್ಬಂದಿಯವರಿಂದ ರಸೀದಿಯನ್ನು ಪಡೆದಿರುವುದಿಲ್ಲ. ಮಾರಣ್ಣ ಹಾಗೂ ಹೂವಿನ ಅಂಗಡಿಯವರ ಬಳಿ ನಾನು ನಿಲ್ಲಿಸಿದ್ದ ಬೈಕಿನ ಬಗ್ಗೆ ವಿಚಾರಿಸಿರುತ್ತೇನೆ . ಕಳ್ಳತನವಾದ ದಿನದಂದು ನಾನು ದೂರನ್ನು ದಾಖಲಿಸಿರುವುದಿಲ್ಲ. ಘಟನೆ ನಡೆದ 17 ದಿನಗಳ ನಂತರ ದೂರನ್ನು ದಾಖಲಿಸಿರುತ್ತೇನೆ. ಬೈಕು ಸಿಗಬಹುದು ಎಂದು ನಾನು ದೂರನ್ನು ದಾಖಲಿಸಿರುವುದಿಲ್ಲ. ನನ್ನ ಬೈಕಿನ ಇಂಜಿನ್ ನಂಬರ್ ಹಾಗೂ ಚಾಸ್ಸಿನಂಬರನ್ನು ಹೇಳಲು ಆಗುವುದಿಲ್ಲ.

ದಿನಾಂಕ 17.08.2025 ರಂದು ಲಿಖಿತವಾಗಿ ದೂರನ್ನು ದಾಖಲಿಸಿರುತ್ತೇನ. ನಾನು ಲಿಖಿತವಾಗಿ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ಅನ್ನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ

ದಾಖಲಿಸಿರುತ್ತೇನೆ. ಕಳ್ಳತನ ಮಾಡಿದ್ದನ್ನು ನಾನು ಖುದ್ದು ನೋಡಿರುವುದಿಲ್ಲ. ಕಳ್ಳತನವಾದ ಬೈಕ್ ನನಗೆ ಮೊದಲು ಬೀರೂರಿನಲ್ಲಿ ಸಿಕ್ಕಿರುತ್ತದೆ. ಆರೋಪಿಯನ್ನು ಬೀರೂರಿನಲ್ಲಿ ನೋಡಿರುವುದಿಲ್ಲ. ಬೀರೂರಿನಲ್ಲಿ ರೈಲ್ವೇ ನಿಲ್ದಾಣದ ಪಾರ್ಕಿಂಗ್ ನವರು ನನಗೆ ಬೈಕನ್ನು ನೀಡಿರುತ್ತಾರೆ. ಪೊಲೀಸರವರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಬೈಕನ್ನು ನೀಡಿರುವುದಿಲ್ಲ. ನಂತರ ನಾನು ಚಳ್ಳಕೆರೆ ಠಾಣೆಗೆ ಹೋಗಿ ಬೈಕನ್ನು ಒಪ್ಪಿಸಿರುತ್ತೇನೆ ಎಂದರೆ ಸರಿ. ನಾನು ಬೈಕನ್ನು ಒಪ್ಪಿಸುವಾಗ ಆರೋಪಿಯು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿ. ಬೈಕನ್ನು ಒಪ್ಪಿಸಿದ 1 ½ ತಿಂಗಳ ನಂತರ ನಾನು ಠಾಣೆಗೆ ಹೋಗಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿಯು ಠಾಣೆಯಲ್ಲಿ ಇರಲಿಲ್ಲ.

ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಠಾಣೆಯಲ್ಲಿ ನೋಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಸಿಸಿ ಟಿ ವಿ ವಿಡಿಯೋವನ್ನು ಕಳ್ಳತನವಾದ ಒಂದು ವಾರದ ನಂತರ ತೋರಿಸಿರುತ್ತಾರೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿಯು ಈ ಮುಂಚೆ ನನಗೆ ಪರಿಚಯ ಇರುವುದಿಲ್ಲ. ಚಾಸಾ-2 ಮತ್ತು 3 ನನ್ನ ಸ್ನೇಹಿತರು. ಸದರಿಯವರ ವಿಳಾಸ ಹೇಳಲು ಆಗುವುದಿಲ್ಲ. ಚಾಸಾ-2 ಮತ್ತು 3 ರವರು ನನ್ನ ಬಳಿ ಕೆಲಸಕ್ಕೆ ಬರುತ್ತಿದ್ದರಿಂದ ಪರಿಚಯಸ್ಥರು. ಮಹಜರ್ ಮಾಡಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ಸ್ಥಳ ಮಹಜರ್ ನ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಮಹಜರ್ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.2 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ.3 ಅನ್ನು ಯಾವ ವಿಚಾರವಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಕೃತ್ಯ ನಡೆದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ದೂರು ದಾಖಲಿಸಿದ ನಂತರ ಮತ್ತೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಆರೋಪಿಯ ಬಗ್ಗೆ ಪೊಲೀಸರು ಹೇಳಿದ್ದರಿಂದ ಗೊತ್ತಾಗಿರುತ್ತದೆ ಎಂದರೆ ಸರಿ. ಇದೇ ಮೊದಲ ಬಾರಿಗೆ ನಾನು ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಹೆಸರು ಹೇಳಲು ಆಗುವುದಿಲ್ಲ. ನಾನು ನಿರ್ಲಕ್ಷತನದಿಂದ ಬೈಕನ್ನು ನಿಲ್ಲಿಸಿ ಪುನಃ ನಾನೇ ಬೈಕನ್ನು ತಂದು ಹಾಜರು ಪಡಿಸಿದ್ದು, ಆರೋಪಿಯು ಯಾವುದೇ ಕಳ್ಳತನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೈಕ್ ನ ಪ್ಲಗ್ ಕಿತ್ತು ಮೇಲೆ ಬಚ್ಚಿಟ್ಟಿದ್ದನು ಹಾಗೂ ಬೈಕಿಗೆ ಆಯಿಲ್ ಹಾಕಿಸಿದ್ದನ್ನು ಆರೋಪಿಯು ಪೊಲೀಸರಿಗೆ ತಿಳಿಸಿರುತ್ತಾನೆ. ಬೈಕಿನ ಇಂಟರ್ ಲಾಕ್ ಮುರಿದಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ